aglasem.com

FOR KARNATAKA CLASS 12 PREPARATION

Karnataka 2nd PUC Model Question Paper 2027 for Kannada (Paper 5)

EXAM	YEAR	TYPE	SUBJECT
Karnataka Class 12	2027	Sample Paper	Kannada

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

2026-27 ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ - 5

ವಿಷಯ: ಕನ್ನಡ (01) **ಗರಿಷ್ಠ ಅಂಕಗಳು: 80**

ಸಮಯ: 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ: 52**

ಸೂಚನೆ: ೧. "ಅ-ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ-ವಿಭಾಗ

(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. (10x1=10)

1. ಯಾರ ಕೈಯಲ್ಲಿ ಚಂದ್ರಾಯುಧವಿದ್ದು ಫಲವಿಲ್ಲ?

ಅ) ಹಂದೆಯ ಕೈಯಲ್ಲಿ ಆ) ಬುದ್ಧಿವಂತನ ಕೈಯಲ್ಲಿ

ಇ) ಮೂರ್ಖನ ಕೈಯಲ್ಲಿ ಈ) ದಡ್ಡನ ಕೈಯಲ್ಲಿ

2. "ಚಿಗುರೆಂದುಂ ಮೆಲೆ ಬೇವು ಸ್ವಾದವಹುದೇ ಚೇಳ್ ಚಿಕ್ಕದೆಂದಳ್ಕರಿಂ

ತೆಗೆಯಲ್ ಕಚ್ಚದೆ ಪಾಲನೂಡಿ ಫಣಿಯಂ ಸಾಕಲ್ಕೆ ವಿಶ್ವಾಸಿಯೇ.....ಪಗೆಯಂ ಬಾಲಕನೆಂಬರೇ" – ಈ ಪದ್ಯದಲ್ಲಿ ಮೂಡಿಬಂದಿರುವ ಭಾವ.

ಅ) ಹುಟ್ಟುಗುಣ ಸುಟ್ಟರೆ ಹೋಗುವುದು ಆ) ಚಿಕ್ಕದೆಂದು ಯಾವುದನ್ನೂ ಉಪೇಕ್ಷಿಸಬಾರದು

ಇ) ಉಪಾಯ ಬಲ್ಲವನಿಗೆ ಅಪಾಯವಿಲ್ಲ ಈ) ಶತ್ರುವನ್ನು ಕಿರಿಯನೆಂದು ತಿರಸ್ಕರಿಸಬಹುದು

3. ತತ್ವಜ್ಞಾನವನ್ನು ಕೇಳದವರು ಯಾರು ಎಂದು ಪುರಂದರದಾಸರು ಹೇಳುತ್ತಾರೆ?

ಅ) ಗುಣವಂತರು ಆ) ಸೋಮಾರಿಗಳು

ಇ) ಬುದ್ಧಿವಂತರು ಈ) ಘೋರಪಾಪಿಗಳು

4. ಇವರ ಕಂಬನಿಯನೊರೆಸಿ ಜೀಸಸ್ ಶಿಲುಬೆ ಏರಿದ್ದಾನೆ.

ಅ) ರಾಜಕಾರಣಿಗಳ ಆ) ಶ್ರೀಮಂತರ

ಇ) ಶೋಷಿತರ ಈ) ಬಂಡವಾಳಿಗರ

5. ಹಚ್ಚಿಟ್ಟ ಹಣತೆಯಲ್ಲಿ ಹೊಸೆದು ಬತ್ತಿಯಾಗಿರುವುದು ಇದು.

ಅ) ಹತ್ತಿ ಆ) ಬೆಣ್ಣೆ

ಇ) ಬೀಜ ಈ) ಎಣ್ಣೆ

6. "ಇದು ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ. ನೀನು ಎರಡು ವಾರ ತಲೆಗೆ ನೀರನ್ನು ಸೋಂಕಿಸಬಾರದು. ನೀರು ಬಿದ್ದರೆ ಕಣ್ಣು ಕೆಟ್ಟುಹೋಗುವ ಅಪಾಯ ಇದೆ. ಇದನ್ನು ಸರಿಯಾಗಿ ನೆನಪಿಟ್ಟುಕೋ" ಎಂಬ ಡಾ. ತಿಮ್ಮಪ್ಪನವರ ಮಾತು ಏನನ್ನು ಧ್ವನಿಸುತ್ತದೆ?

ಅ) ವೈದ್ಯರ ಸಲಹೆ ಮತ್ತು ಎಚ್ಚರಿಕೆ ಆ) ರೋಗಿಯ ಬಗ್ಗೆ ಅಸಡ್ಡೆ

ಇ) ವೈದ್ಯರ ಉಡಾಫೆ ಮಾತು ಈ) ವೈದ್ಯರ ಭಯಪಡಿಸುವಿಕೆ

7. ಬದುಕನ್ನು ಪ್ರೀತಿಸಿದ ಸಂತ ಇವರು

ಅ) ಸಿ. ವಿ ರಾಮನ್ ಆ) ಹಾ. ಮಾ. ನಾಯಕ

ಇ) ಡಾII ಸಿ. ಎನ್. ಆರ್ ರಾವ್ ಈ) ಅಬ್ದುಲ್ ಕಲಾಂ

8. ಸರ್ಕಾರ ಬೆಂಕಿಕಡ್ಡಿಯ ಮರ ಕಡಿಯಲು ಗುತ್ತಿಗೆ ಕೊಟ್ಟಿದ್ದು ಯಾವ ಕಂಪನಿಗೆ?

ಅ) ರಾಮ್ಕೋ ಆ) ವಿಮ್ಕೋ

ಇ) ಬಿಮ್ಕೋ ಈ) ಲಿಮ್ಕೋ

9. ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣ

ಅ) ಪುಟ್ಟಯ್ಯನ ಯೋಗಕ್ಷೇಮ ವಿಚಾರಿಸಲು.

ಆ) ಹುಚ್ಚುನಾಯಿ ಕೃಷ್ಣೇಗೌಡರ ಆನೆಗೂ ಕಚ್ಚಿದೆ ಎಂದು ವರ್ತಮಾನ ಕೊಡಲು.

ಇ) ದನಗಳಿಗೆ ಹುಚ್ಚುನಾಯಿ ಕಚ್ಚಿದ್ದರಿಂದ ಇಂಜೆಕ್ಷನ್ ಬಗ್ಗೆ ವಿಚಾರಿಸಲು.

ಈ) ತನಗೇ ಹುಚುನಾಯಿ ಕಚ್ಚಿದ್ದರಿಂದ ಇಂಜೆಕ್ಷನ್ ಬಗ್ಗೆ ವಿಚಾರಿಸಲು.

10. "ಸತ್ತಿರೋದು ನಿಮ್ಮದು, ಇವತ್ತಲ್ಲ ನಾಳೆ ನೀವೇ ಕೊಂದು ತಿನ್ನೋ ಪ್ರಾಣಿ. ಅದಕ್ಕೆ ಯಾಕ್ರಿ ನಷ್ಟ ಕಟ್ಟಿಕೊಡಬೇಕು? ನಾಳೆ ಮಾಡೋ ಸಾರು ಇವತ್ತೇ ಮಾಡ್ರಿ" ಎಂಬ ಫಾರೆಸ್ಟರ್ ನಾಗರಾಜನ ಮಾತಿನಲ್ಲಿರುವುದು.

ಅ) ಟೀಕೆ ಆ) ತಮಾಷೆ

ಇ) ಉಡಾಫೆ ಈ) ಗೌರವ

(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5x1=5)**

(ರಾಮಚಂದ್ರ, ವಿಜ್ಞಾನಿ, ದ್ವೀಪಜೀವಿ, ವಾರ್ತಾ ಇಲಾಖೆ, ಕಿಡ್ನಿಸ್ಟೋನ್, ಬಣ್ಣ ಗಾಂಭೀರ್ಯ)

11. ಲೇಖಕಿಯ ಪತಿ ..... ತೊಂದರೆಯಿಂದ ಬಳಲಿದರು.

12. ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ..... ಆಗುತ್ತಾರೆ.

13. ಬೆಳ್ಳಿಲೋಟ ..... ಅನ್ನು ಕಳೆದುಕೊಂಡಿತ್ತು.

14. ವಸುಧೆಗೆ ಒಡೆಯನೆನಿಸಿದವನು .....

15. ಲೇಖಕರ ದೃಷ್ಟಿಯಲ್ಲಿ ಹಳ್ಳಿಯ ಚಹಾ ಫಳಾರದ ಅಂಗಡಿ ..... ಇದ್ದಂತೆ.

(ಇ) 16. ಹೊಂದಿಸಿ ಬರೆಯಿರಿ. **(5x1=5)**

(ಅ) ನಾಗಚಂದ್ರ	೧) ಒಮ್ಮೆ ನಗುತ್ತೇವೆ
(ಆ) ಪುರಂದರದಾಸರು	೨) ಮುಂಬೈ ಜಾತಕ
(ಇ) ಮುಕ್ತಕಂಠ	೩) ಪಂಪ ರಾಮಾಯಣ
(ಈ) ಸುಕನ್ಯಾ ಮಾರುತಿ	೪) ಪಗೆಯಂ ಬಾಲಕನೆಬರೇ
(ಊ) ಪುಲಿಗೆರೆ ಸೋಮನಾಥ	೫) ಕೀರ್ತನೆ
	೬) ದ. ರಾ ಬೇಂದ್ರೆ

ಆ-ವಿಭಾಗ

(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(3x2=6)**

17. ರಾವಣ ಜಾನಕಿಯನ್ನು ನೋಡಲು ಎಲ್ಲಿಗೆ ? ಯಾರು ಬರುವಂತೆ ಬಂದನು?
18. ಯಾರಿಂದ ಯಾವುದನ್ನು ಹೇಗೆ ಕಲಿಯಬೇಕೆಂದು ಸೋಮನಾಥನು ಹೇಳಿದ್ದಾನೆ?
19. ಕವಿ ಬೇಂದ್ರೆ ಮಕ್ಕಳಿಗೆ ಬಾಳಿನ ಬಗ್ಗೆ ಕೊಡುವ ಸಂದೇಶವೇನು?
20. ಯಾವ ವಸ್ತುಗಳು ಕಾಲರಾಯನ ಗುಜರಿ ಸೇರಿಲ್ಲ?

(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(2x2=4)**

21. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?
22. ಇಂಗ್ಲಿಷ್ ಮೂಲಕವಾದ ಶಿಕ್ಷಣ ಹೇಗಿರುತ್ತದೆ?
23. ಮಕ್ಕಳು ಹದಿನೈದು ವರ್ಷ ತಲುಪುವವರೆಗೆ ಅವರಿಗೆ ಆದರ್ಶ ಮಾದರಿಗಳು ಯಾರು ಯಾರು?
24. ಪಟ್ಟಣದ ಹೊಟೇಲಿನ ಕಟ್ಟಡ ಹೇಗಿದೆ?

(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(3x2=6)**

25. ನಿರೂಪಕರು ಕೊಡಲಿ ಅಮೂಲ್ಯವಾದುದಾಗಿರಲಿಲ್ಲ ಎಂದು ಹೇಳಲು ಕಾರಣವೇನು?
26. ಡ್ರೈವರ್‌ನ ತಲೆ ಜಜ್ಜಿ ಹೋದದ್ದು ಹೇಗೆ? ಆನೆ ಅದಕ್ಕೆ ಕಾರಣವೆ?
27. ಆನೆಯನ್ನು ಮಠದವರಂತೆ ಇತರರಿಗೆ ದಾಟಿಸಿ ಬಿಡಲು ಕೃಷ್ಣೇಗೌಡನಿಗೆ ಇದ್ದ ತೊಡಕುಗಳೇನು?
28. ಗುರುತು ಸಿಗದ ಹೆಣ ವೇಲಾಯುಧನದು ಎಂದು ತಿಳಿದ ಮೇಲೆ ಪೊಲೀಸರಿಗೆ ಬಂದ ಪೀಕಲಾಟವೇನು?

ಇ-ವಿಭಾಗ

(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2x3=6)**

29. ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ.
30. ಹಿತ್ತಾಳೆಗಿಂತ ಬಲುಹೀನ.
31. ಹಲೋ ನಾನೇ ಕಣ್ರೀ ಮಾತಾಡ್ರಿ ಮಾತಾಡ್ರಿ.

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1x3=3)**

32. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ.
33. ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು.
34. ಪದ್ಯಂ ವಧ್ಯಂ: ಗದ್ಯಂ ಹೃದ್ಯಂ.

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)

35. ಆನೆಗೂ ಮಾನ ಮರ್ಯಾದೆ ಇರುತ್ತೆ ಇರುತ್ತೆ ತಿಳುಕೋ.

36. ನಂಗೇನು ಈ ನಾಯಿಗಳನ್ನ ಕಂಡರೆ ಪ್ರೀತೀನ ಸ್ವಾಮಿ!

ಈ-ವಿಭಾಗ

(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (2x4=8)

37. ಉರಿಲಿಂಗಪೆದ್ದಿ ಹೇಳಿರುವಂತೆ ಗುರು ಲಘುವರ್ತನದಲ್ಲಿ ಏಕೆ ವರ್ತಿಸಬಾರದು? ವಿವರಿಸಿ.

38. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

39. 'ಮುಂಬೈ ಜಾತಕ' ಕವಿತೆಯಲ್ಲಿ ನಗರ ಜೀವನ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.

40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಳಿವಿನೆಗಂ॥

ಅ. ಈ ಪದ್ಯಭಾಗದಲ್ಲಿ ಹೇಳಲಾದ ಪ್ರಾಣಪ್ರಿಯರು ಯಾರು? **(1 ಅಂಕ)**

ಆ. ರಾವಣನು ಸೀತೆಯನ್ನು ಯಾವ ವ್ಯಾಮೋಹದಿಂದ ಅಗಲಿಸಿದನು? **(1 ಅಂಕ)**

ಇ. ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಈ ಪದ್ಯಭಾಗದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ? **(2 ಅಂಕ)**

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)

41. ಅಭಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು 'ವಾಲ್‌ಪರೈ ಅಭಿವೃದ್ಧಿ ತಂದ ದುರಂತ' ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

42. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣಗಳೇನು?

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)

43. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

44. ವೇಲಾಯುಧನ ಸಾವಿನ ಸಂದರ್ಭವನ್ನು ಚಿತ್ರಿಸಿ.

ಉ-ವಿಭಾಗ

(ಭಾಷಾಭ್ಯಾಸ)

(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (4x2=8)

45. ಕೆಳಗಿನ ಎರಡು ಪದಗಳಿಗೆ **ನಾನಾರ್ಥಗಳನ್ನು** ಬರೆಯಿರಿ.

ಲಘು, ಹದ್ದು, ಕಳೆ

46. ಕೆಳಗಿನ ಎರಡು ಪದಗಳ **ಗುಣವಾಚಕಗಳನ್ನು** ಬರೆಯಿರಿ.

ರಸಬಳ್ಳಿ, ಸುದೈವ, ನಳಿನಾನನೆ

47. ಕೆಳಗಿನ ಎರಡು ಕ್ರಿಯಾಪದಗಳ **ಧಾತುರೂಪಗಳನ್ನು** ಬರೆಯಿರಿ.

ಎದ್ದರು, ಹಿಡಿದನು, ಬರೆಯುವಳು

48. ಕೆಳಗಿನ ಎರಡು ಪದಗಳ **'ತದ್ಭವ' ರೂಪ** ಬರೆಯಿರಿ.

ತ್ಯಾಗ, ವಿಸ್ತಾರ, ಕಾವ್ಯ

49. ಕೆಳಗಿನ ಎರಡು ಪದಗಳ **ವಿಭಕ್ತಿಗಳನ್ನು** ಹೆಸರಿಸಿ.

ಪೈರಿಗೆ, ಮೊಮ್ಮಗಳನ್ನು, ಬೆಳ್ನುಡಿಯೊಳ್

50. ಎರಡು **ದ್ವಿರುಕ್ತಿ** ಪದಗಳನ್ನು ಬರೆಯಿರಿ

(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. (1x4=4)

51. ನನ್ನ ಬಾಲ್ಯದ ಬದುಕು

ಅಥವಾ

ವೃದ್ಧಾಶ್ರಮಗಳ ಹೆಚ್ಚಳ ಹಾಗೂ ಭಾರತೀಯ ಸಮಾಜ

(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ. (1x4=4)

52. ಚಿತ್ತಯ್ಯ/ಈರಮ್ಮ, ದ್ವಿತೀಯ ಪಿಯುಸಿ, ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು, ನವನಗರ, ಬಾಗಲಕೋಟೆ - ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ಸಣ್ಣಯ್ಯ, ಗೊಲ್ಲರಹಟ್ಟಿ, ಹಾಲೇಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ- ಈ ವಿಳಾಸದಲ್ಲಿರುವ ನಿಮ್ಮ ತಂದೆಗೆ **ಕಾಲೇಜಿನ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಹಣ ಮತ್ತು ಅನುಮತಿಯನ್ನು** ಕೋರಿ ಪತ್ರ ಬರೆಯಿರಿ.

ಅಥವಾ

ಸಾರಾ/ಜೋಸೆಫ್, #136, ತುಂಗಾ ನಿಲಯ, ಕುವೆಂಪು ರಸ್ತೆ, ಮಂಜುನಾಥನಗರ, ಸಿಂಧನೂರು-584128 ಈ ವಿಳಾಸದಲ್ಲಿ ನೀವು ವಾಸವಾಗಿದ್ದೀರೆಂದು ಭಾವಿಸಿ ನಿಮ್ಮ ಬಡಾವಣೆಗೆ **ಸಮರ್ಪಕ ವಿದ್ಯುತ್ ಪೂರೈಕೆಗಾಗಿ** ಕಾರ್ಯನಿರ್ವಾಹಕ ಅಭಿಯಂತರರು, ಕೆ.ಪಿ.ಟಿ.ಸಿ.ಎಲ್, ಶಕ್ತಿ ಭವನ, ಸಿಂಧನೂರು-584128 ಇವರಿಗೆ ಪತ್ರ ಬರೆಯಿರಿ.

* * * * * * * *